ಜೊತೆಗೆ 22 ಗೋದಾಮುಗಳಲ್ಲಿ ತರಕಾರಿಯನ್ನು ಇರಿಸುವುದಕ್ಕೋಸ್ಕರ ಕಾದಿರಿಸಿದ್ದರೂ ಕೂಡ ಅದರಲ್ಲಿ ಯಾರೂ ಬಂದಿರುವುದಿಲ್ಲ. ಇವೆಲ್ಲವುಗಳ ಹಿನ್ನೆಲೆಯಲ್ಲಿ, ಇದಕ್ಕೂ, ಮೇಲಾಗಿ ಈ ಮಂಡ್ಯ ಮಾರುಕಟ್ಟೆಯನ್ನು ಶ್ರೀರಂಗಪಟ್ಟಣ ಮಾರುಕಟ್ಟೆಯಾಗಿ ಬೇರ್ಪಡಿಸಬೇಕೆನ್ನುವಂತಹ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದರಿಂದ ಈಗ ಅಧಿಸೂಚನೆಯನ್ನು ಕೂಡ ಪ್ರಿಲಿಮಿನರಿ ನೋಟಿಫಿಕೇಷನ್‌ನ್ನು ಮಾಡಿರುವುದರಿಂದ ಇವೆಲ್ಲವುಗಳ ಹಿನ್ನೆಲೆಯಲ್ಲಿ 25 ಎಕರೆ 28 ಗುಂಟೆ ಜಮೀನನ್ನು ಖರೀದಿ ಮಾಡುವಂತಹ ಅವಶ್ಯಕತೆಯಿಲ್ಲ ಎನ್ನುವಂತಹ ನಿರ್ಣಯ ಸಾರ್ಕರಕ್ಕೆ ಬಂದಿದೆ. ಅವರಿಗೆ ಬಿಟ್ಟುಕೊಡುವಂತಹ ಪ್ರಶ್ನೆಯೇ ಇಲ್ಲ. ಅದನ್ನು ಸರ್ಕಾರದವರು ತೆಗೆದುಕೊಂಡಿಲ್ಲವೆಂದ ಮೇಲೆ ಬಿಟ್ಟುಕೊಡುವಂತಹ ಪ್ರಶ್ನೆಯೇ ಬರುವುದಿಲ್ಲ, ಆ ಜಮೀನಿನ ಮಾಲೀಕರು ಇನ್ನೂ ಮಾಲೀಕರಾಗಿದ್ದಾರೆ. ಅದಕ್ಕಾಗಿ ಅದು ಅವಶ್ಯಕತೆಯಿಲ್ಲವೆಂದು ಸರ್ಕಾರ ತೀರ್ಮಾನವನ್ನು ಮಾಡಿದೆ.

ಶ್ರೀ ಎಂ.ಎಸ್. ಆತ್ಮಾನಂದ: ಮಾನ್ಯ ಅಧ್ಯಕ್ಷರೆ, ಏಕೆಂದರೆ ಹಣ ಕಟ್ಟದೆ ಇರುವುದರಿಂದ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಡ್ರಾಪ್ ಮಾಡಿರುವಂತಹದ್ದು; ರೈತರ ಮತ್ತು ಮಾರುಕಟ್ಟೆ ಸಮಿತಿಯ ಮುಂದೆ ನೇರವಾದ ಒಂದು ಸಮಾಲೋಚನೆ ಅಥವಾ ಒಡಂಬಡಿಕೆ ಆಗಿರತಕ್ಕಂಥದ್ದು ಖಚಿತವಾಗಿ ಸರ್ಕಾರ ಅದು ನಮಗೆ ಬೇಡವೆನ್ನತಕ್ಕಂಥದ್ದನ್ನು ರೈತರಿಗೆ ಲಿಖಿತ ಮೂಲಕವಾಗಿ ತಾವು ತಿಳಿಸಬೇಕೆಂದು ನಾನು ಈ ಸಮಯದಲ್ಲಿ ಸನ್ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು: ನಾವು ಅದನ್ನು ಖರೀದಿ ಮಾಡಲಿಲ್ಲವೆಂದು ಮೇಲೆ ಅದು ಬೇಡವೆನ್ನುವಂತಹ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಏಕೆಂದರೆ, ನಾವು ಜಮೀನಿನ ಖರೀದಿಯ ಬಗ್ಗೆ ಸರ್ಕಾರದಲ್ಲಿ ಕೆಲವು ಹಂತದಲ್ಲಿ ಪ್ರಸ್ತಾವನೆ ನಡೆಯುತ್ತಿರುವಂತಹ ಸಂದರ್ಭದಲ್ಲಿ, ನಾವು ಅದನ್ನು ಖರೀದಿಯೇ ಮಾಡಿರುವುದಿಲ್ಲ. ಆ ಖರೀದಿಯ ಸಲುವಾಗಿ 50,000 ರೂಪಾಯಿಗಳ ಠೇವಣಿಯನ್ನು ಇಡಬೇಕೆನ್ನುವಂತಹದ್ದು, ಆ ಕರಾರನ್ನು ಅವರುಗಳು ಉಲ್ಲಂಘಿಸಿದ್ದರಿಂದ ಅದನ್ನು ರದ್ದು ಮಾಡಲಾಗಿದೆ. ಈಗ ಅಲ್ಲಿ ಮಾಲೀಕರುಗಳು ಮಾಲೀಕರಾಗಿಯೇ ಇದ್ದಾರೆ. ಸರ್ಕಾರವು ಅದನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಯಾವ ರೀತಿಯಿಂದಲೂ ಕರಾರು ಪತ್ರವನ್ನು ಮಾಡಿಕೊಂಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರವು ಅವರಿಗೆ ಖಚಿತವಾಗಿ ಉತ್ತರ ಕೊಡುವಂತಹ ಅವಶ್ಯಕತೆ ಬರುವುದಿಲ್ಲ.

ಬೆಂಗಳೂರು ನಗರದಲ್ಲಿ ಹಳದಿಕಾರ್ಡುಗಳ ವಿತರಣೆ

60(251) ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು (ಶಿವಾಜಿನಗರ) ಮಾನ್ಯ ಆಹಾರ, ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಬಡತನ ರೇಖೆಗಿಂತ ಕೆಳಗೆ ಇರತಕ್ಕ ಕುಟುಂಬಗಳ ಸಮೀಕ್ಷಾ ಕಾರ್ಯ ಪ್ರಾರಂಭವಾಗಿದೆಯೇ

ಆ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಎಷ್ಟು ಹಳದಿ ಕಾರ್ಡುಗಳನ್ನು ವಿತರಿಸಲಾಗಿದೆ;

ಇ) ಬೆಂಗಳೂರು ನಗರದಲ್ಲಿರುವ ಕೊಳಗೇರಿ: ನಿವಾಸಿಗಳಿಗೆ ಇನ್ನು ಎಷ್ಟು ಹಳದಿ ಕಾರ್ಡುಗಳನ್ನು ನೀಡಬೇಕಾಗಿದೆ;

ಈ) ಈ ಹಳದಿ ಕಾರ್ಡುಗಳನ್ನು ನೀಡಲು ರೂ.45 ಮಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಬಡತನ ರೇಖೆಗಿಂತ ಕೆಳಗಿರುವವರಿಂದ ಈ ಶುಲ್ಕವನ್ನು ವಸೂಲು ಮಾಡುತ್ತಿರುವುದು ಸರಿಯೇ;

ಊ) ಬೆಂಗಳೂರು ನಗರದಲ್ಲಿ ಇಲ್ಲಿಯವರೆಗೆ ಹೊಸದಾಗಿ ಹಳದಿ ಕಾರ್ಡುಗಳನ್ನು ಎಷ್ಟು ಜನರಿಗೆ ನೀಡಲಾಗಿದೆ?

ಶ್ರೀ ರಾಮಲಿಂಗರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಪ್ರಾರಂಭವಾಗಿದೆ.

ಆ) ದಿನಾಂಕ: 3-7-2002 ರವರೆಗೆ 47,125 ಹಳದಿ ಕಾರ್ಡುಗಳನ್ನು ವಿತರಿಸಲಾಗಿದೆ.

ಇ) ಹಾಲಿ ಕೊಳಚೆ ಪ್ರದೇಶಗಳ ಮನೆ ಮನೆ ಸಮೀಕ್ಷೆ ನಡೆಯುತ್ತಿದ್ದು ಈಗ ನಿಖರವಾದ ಕುಟುಂಬಗಳ ಸಂಖ್ಯೆಯನ್ನು ನೀಡಲು ಬರುವುದಿಲ್ಲ.

ಈ) ಹೌದು.

ಉ) ಸರಿ.

ಊ) ದಿನಾಂಕ: 3-7-2002ರವರೆಗೆ 47,125 ಹಳದಿ ಕಾರ್ಡುಗಳನ್ನು ನೀಡಲಾಗಿದೆ.

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು : ಸನ್ಮಾನ್ಯ ಅಧ್ಯಕ್ಷರೆ ನಾನು 'ಅ' ಪ್ರಶ್ನೆಯನ್ನು ಕೇಳಿದ್ದಕ್ಕೆ ಮಾನ್ಯ ಸಚಿವರು 'ಪ್ರಾರಂಭವಾಗಿದೆ' ಎಂದು ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ಕರ್ನಾಟಕ ರಾಜ್ಯದ ಮೇಲೆ ಒಂದು ದೂರು ಇದೆ, ನಾವು ಇಲ್ಲಿ ಸರಿಯಾಗಿ ಕಾರ್ಯಕ್ರಮವನ್ನು ಕೈಗೆತ್ತಿಕೊಂಡು ಮಾಡುತ್ತಿಲ್ಲವೆಂದು ಹೇಳಿ ಇದನ್ನು ಪ್ರಾರಂಭ ಮಾಡಿರುವುದು ಯಾವಾಗ? ಇದನ್ನು ಯಾವತ್ತು ಮುಗಿಸುತ್ತೀರಿ? ನಾನು ಎರಡನೆಯ ಪ್ರಶ್ನೆಯನ್ನು ಕೇಳಿದ್ದಕ್ಕೆ, ಇದರ ಬಗ್ಗೆ ಬೆಂಗಳೂರು ನಗರದಲ್ಲಿ ಸುಮಾರು 6 ಲಕ್ಷಕ್ಕಿಂತಲೂ ಹೆಚ್ಚು ಜನ ಕೊಳಗೇರಿಗಳಲ್ಲಿ ವಾಸ ಮಾಡುತ್ತಿದ್ದಾರೆ; ಇವರಿಗೆ 47,125 ಹಳದಿ ಕಾರ್ಡುಗಳನ್ನು ಕೊಟ್ಟಿರುತ್ತೇರೆಂದು ಹೇಳಿದ್ದಾರೆ. ಇದರಲ್ಲಿ ಅವ್ಯವಹಾರವು ನಡೆದಿದೆ, ಇದನ್ನು ಬಡವರಲ್ಲದವರಿಗೂ ಕೂಡ ಕೊಟ್ಟಿದ್ದಾರೆ, ವಾರ್ಷಿಕ ಆದಾಯ ಇದರಲ್ಲಿ ಬರೆಯುತ್ತಿಲ್ಲವೆಂದು ದೂರುಗಳೂ ಸಹ ಇವೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ?

ಶ್ರೀ ರಾಮಲಿಂಗಾರೆಡ್ಡಿ: ಸನ್ಮಾನ್ಯ ಅಧ್ಯಕ್ಷರೆ ಈ ಹಳದಿ ಕಾರ್ಡನ್ನು ಕೊಡುವಂತಹ ಕಾರ್ಯಕ್ರಮವನ್ನು ನಾವು ಒಂದನೇ ಏಪ್ರಿಲ್‌ನಂದು ಪ್ರಾರಂಭ ಮಾಡಿದ್ದೇವೆ. ದಿನಾಂಕ: 3-7-2002ರವರೆಗೆ 47,125 ಜನರಿಗೆ ನಮ್ಮ ನಗರ ಪ್ರದೇಶದಲ್ಲಿರುವಂತಹವರಿಗೆ ಕೊಳಚೆ ಪ್ರದೇಶಗಳಲ್ಲಿ ಹಳದಿ ಕಾರ್ಡುಗಳನ್ನು ಕೊಟ್ಟಿದ್ದೇವೆ. ಆಗಸ್ಟ್ 15ರೊಳಗೆ ಇದು ಮುಗಿಯುತ್ತದೆ,

ಬೆಂಗಳೂರು ನಗರದಲ್ಲೂ ಸಹ ಸುಮಾರು 6,72,228 ರೇಷನ್ ಕಾರ್ಡುಗಳನ್ನು ಎಪಿಎಲ್‌ನವರಿಗೆ ನೀಡಲಾಗಿದೆ. ಮತ್ತು 17,122 ಬೇರೆ ಗೌರವಾನ್ವಿತ ಕಾರ್ಡನ್ನು ಕೊಟ್ಟಿದ್ದೇವೆ. ಒಟ್ಟು 7,36,000 ರೇಷನ್ ಕಾರ್ಡುಗಳನ್ನು ಬೆಂಗಳೂರು ನಗರದಲ್ಲಿ ಕೊಟ್ಟಿರುತ್ತೇವೆ. ಇದರಲ್ಲಿ ಯಾವುದೇ ರೀತಿಯ ಅವ್ಯವಹಾರಗಳಾಗಿರುವುದಿಲ್ಲ. ಆಕಸ್ಮಾತ್ ಎಲ್ಲಿಯಾದರೂ ಅವ್ಯವಹಾಗಳು ಆಗಿದೆ ಎಂದು ನೀವು ಬರೆದುಕೊಟ್ಟಲ್ಲಿ ಅದನ್ನು ನಾವು ನಮ್ಮ ಅಧಿಕಾರಿಗಳಿಗೆ ತಿಳಿಸಿ ಏನು ತಪ್ಪಾಗಿರುತ್ತದೆಯೋ ಅದನ್ನು ಸರಿ ಮಾಡಿಸುತ್ತೇವೆ.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು: ನಾವು ಊಟಕ್ಕೆ ಇಲ್ಲದೇ ಇರುವವರಿಗೆ ಹಳದಿ ಕಾರ್ಡನ್ನು ಕೊಡುತ್ತೇವೆ. ಅದರಲ್ಲಿಯೂ ಕೂಡ 45 ರೂಪಾಯಿಗಳನ್ನು ತೆಗೆದುಕೊಳ್ಳುವಂತಹ ವ್ಯವಸ್ಥೆ ಇದೆ. ಸರ್ಕಾರವು ಈ ವೆಚ್ಚವನ್ನು ಭರಿಸುವುದಕ್ಕೆ ಆಗುವುದಿಲ್ಲವೇ? ಇದನ್ನು ಯಾವುದಕ್ಕೋಸ್ಕರ ಈ 45 ರೂಪಾಯಿಗಳನ್ನು ತಾವು ತೆಗೆದುಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಿದ್ದೀರಿ? ಅದರಲ್ಲೂ ವಿಶೇಷವಾಗಿ ಬಡತನ ರೇಖೆಗಿಂತಲೂ ಕೆಳಗೆ ಇರುವ ಕುಟುಂಬಗಳ ಬಗ್ಗೆ ಯಾವತ್ತು ಪೂರ್ತಿ ಅದರ ಮಾಹಿತಿಯನ್ನು ಪಡೆದುಕೊಳ್ಳುತ್ತೀರೆಂಬ ಬಗ್ಗೆ ವಿವರವನ್ನು ಕೇಳುತ್ತಿದ್ದೇನೆ.

ಶ್ರೀ ರಾಮಲಿಂಗಾರೆಡ್ಡಿ: ಈ ಹಳದಿ ಕಾರ್ಡನ್ನು ಬೆಂಗಳೂರು ನಗರದಲ್ಲಿರತಕ್ಕಂತಹ ಎಲ್ಲಾ ಸುಮಾರು 400 ಕೊಳಚೆ ಪ್ರದೇಶಗಳಲ್ಲಿ ಅವರೆಲ್ಲರಿಗೂ ಕೊಡುತ್ತೇವೆ. ಅಲ್ಲಿ ಯಾರು ಕಲರ್ ಟಿವಿಯನ್ನು ಇಟ್ಟುಕೊಂಡಿರುತ್ತಾರೆ, ಸರ್ಕಾರಿ ನೌಕರರು ಇರುತ್ತಾರೆ. ಅವರಿಗೆ ಇದನ್ನು ಕೊಡುವುದಿಲ್ಲ. ಉಳಿದಿರತಕ್ಕಂತಹ ಎಲ್ಲಾ ಜನರಿಗೂ ಕೂಡ ಅಲ್ಲಿ ಹಳದಿ ಕಾರ್ಡನ್ನು ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು 45 ರೂಪಾಯಿಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಹಿಂದೆ 3 ಫೋಟೋಗಳನ್ನು ಕೊಡಬೇಕಾಗಿತ್ತು, ನಮ್ಮ ಬೆಂಗಳೂರಿನಲ್ಲಿ 12 ಕೇಂದ್ರಗಳಿವೆ, ಹಿಂದೆ ಇದು ಇನ್ನೂ ಜಾಸ್ತಿಯಿತ್ತು. ಈಗ ಒಟ್ಟು 12 ಕೇಂದ್ರಗಳಿವೆ, ಈಗ ನಾವೇ 3 ಫೋಟೋಗಳನ್ನು ತೆಗೆಸುತ್ತಿದ್ದೇವೆ. ಮೊದಲು ಇನ್ ಕಂ ಸರ್ಟಿಫಿಕೇಟ್‌ನ್ನು ಕೊಡಬೇಕಾಗಿತ್ತು, ಅದೂ ಕೂಡ ಈಗ ಕೊಡಬೇಕಾಗಿರುವುದಿಲ್ಲ. ಹಿಂದೆ ಕಾರ್ಡುಗಳನ್ನು ಪಡೆಯಲು ಆಫೀಸ್‌ಗಳಿಗೆ 4-5 ಬಾರಿ ಹೋಗಬೇಕಾಗಿತ್ತು, ಈಗ ಯಾರೂ ಹೋಗಬೇಕಾಗಿರುವುದಿಲ್ಲ. ಮನೆಮನೆಗಳಿಗೆ ಹೋಗಿ ನಾವೇ ಸರ್ವೆ ಮಾಡಿಕೊಂಡು ಹಳದಿ ಕಾರ್ಡನ್ನು ಕೊಡುತ್ತಿದ್ದೇನೆ. ಫ್ರೀ ಕೂಪನ್‌ಗಳನ್ನು ಕೂಡ ನಾವು ಒಂದು ವರ್ಷಕ್ಕೆ ಕೊಡುತ್ತಿದ್ದೇವೆ. ಒಂದು ವರ್ಷಕ್ಕೆ ಏನು ಕೂಪನ್‌ಗಳು ಬರುತ್ತದೆಯೋ ಅದನ್ನು ಕೊಡುತ್ತಿದ್ದೇವೆ. ಮುಂದಿನ ವರ್ಷದಿಂದ ಒಂದು ರೂಪಾಯಿಗೆ ಕೂಪನ್ ಕಾರ್ಡು ಕೊಡುತ್ತೇವೆ. ಇದರಲ್ಲಿ ಯಾವುದೇ ಅವ್ಯವಹಾರಗಳಾಗಿರುವುದಿಲ್ಲ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ಈ ಸ್ಲಮ್ ಪ್ರದೇಶಗಳಲ್ಲಿ ಬಡ ಜನರಿಗೆ ಏನು ಹಳದಿ ಕಾರ್ಡುಗಳನ್ನು ವಿತರಣೆ ಮಾಡತಕ್ಕಂತಹ ಕಾರ್ಯಕ್ರಮ ಒಳ್ಳೆಯ ರೀತಿಯಿಂದ ನಡೆಯುತ್ತಿದೆ, ಇದರಲ್ಲಿ ಕೆಲವೊಂದು ಲೋಪದೋಷಗಳಿವೆ; ಬಡಜನರು ಕೇವಲ ಸ್ಲಮ್ ಪ್ರದೇಶಗಳಲ್ಲಿ ಮಾತ್ರವಿಲ್ಲ, ಬೇರೆ ಬೇರೆ ಬಡಾವಣೆಗಳಲ್ಲೂ ಕೂಡ, ಕೆಲವು ಏರಿಯಾಗಳಲ್ಲಿ ಬಡಜನರು ಇರುತ್ತಾರೆ. ಅವರಿಗೆ ಏನು ವ್ಯವಸ್ಥೆಯನ್ನು ಮಡುತ್ತೀರೆಂದು ತಾವು ಹೇಳಬೇಕಾಗುತ್ತದೆ. ನಾವು ಅಧಿಕಾರಿಗಳನ್ನು ಕೇಳಿದಾಗ ಅವರು ನಾವು ಕೇವಲ ಸ್ಲಮ್ ಪ್ರದೇಶಗಳಲ್ಲಿ ಮಾತ್ರ

ಮಾಡುತ್ತೇವೆಂದು ಹೇಳುತ್ತಾರೆ. ಈ ಪ್ರದೇಶಗಳಲ್ಲಿ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಕೆಲವು ಬಡ ಜನರು ಬಾಡಿಗೆ ಮಾಲ್ಡ್ ಮನೆಯಲ್ಲಿ ವಾಸ ಮಾಡುತ್ತಿರುತ್ತಾರೆ, ಅವರು ನಿಜವಾಗಿಯೂ ಕೂಡ ಬಡವರಾಗಿರುತ್ತಾರೆ. ಮೌಲ್ಡ್ ಮನೆಯೆಂದು ಅವರು ಹೇಳಿ ಅದು ಹೆಂಚಿನ ಮನೆಯಲ್ಲ, ಗುಡಿಸಲು ಅಲ್ಲ ಅವರಿಗೂ ಕೂಡ ಹಳದಿ ಕಾರ್ಡನ್ನು ಕೊಡದೆ ಇರತಕ್ಕಂತಹ ಉದಾಹರಣೆಗಳು ಬಹಳ ಇವೆ. ಈ ವಿಚಾರದಲ್ಲಿ ಮಾನ್ಯ ಸಚಿವರು ಅವರಿಗೆ ಅನ್ಯಾಯವಾಗಬಾರದೆಂಬ ದೃಷ್ಟಿಯಿಂದ ಆ ಉದ್ದೇಶದಿಂದ ತಾವು ಏನಾದರೊಂದು ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎ.ಸೋಮಣ್ಣ : ಮಾನ್ಯ ಅಧ್ಯಕ್ಷರೆ, ಈ ಹಳದಿ ಕಾರ್ಡುಗಳನ್ನು ಪಟ್ಟಣ ಪ್ರದೇಶಗಳಲ್ಲಿ ಕೊಡುತ್ತಿದ್ದಾರೆ, ಇದರ ಬಗ್ಗೆ ಸನ್ಮಾನ್ಯ ಸಚಿವರು ಹೇಳಿದರು, ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡತಕ್ಕಂತಹವರು ಒಂದು ವರ್ಗದವರಾದರೆ, ಬೆಂಗಳೂರು ನಗರದಲ್ಲಿ ಬಹುತೇಕ ಕಡೆ ಸಣ್ಣಪುಟ್ಟ ಮನೆಗಳಲ್ಲಿ ವಾಸಮಾಡಿಕೊಂಡು ಮನೆ ಕೆಲಸವನ್ನು ಮಾಡಿಕೊಂಡು, ಕಡ್ಡಿಯನ್ನು ಹೊಸೆಯತಕ್ಕಂತಹವರು ಇಂತಹ ಬಹುತೇಕ ಕುಟುಂಬಗಳು ಇವತ್ತು ಬೆಂಗಳೂರು ನಗದಲ್ಲಿ ವಾಸ ಮಾಡುತ್ತಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಿಂದ ವಿನಂತಿ ಮಾಡುವುದೇನೆಂದರೆ, ಹಿಂದೆ ಜನತಾದಳ ಸರ್ಕಾರವಿದ್ದಾಗ ಇದೇ ರೀತಿಯಾದ ಪ್ರಶ್ನೆಯು ಉದ್ಭವಿಸಿದಾಗ ಅಧಿಕಾರಿಗಳು ಸ್ವತ ಅವರೇ ಬಡಾವಣೆಗಳಿಗೆ ಹೋಗಿ ಅಲ್ಲಿರತಕ್ಕಂತಹ ಬಡವರನ್ನು ಗುರುತಿಸಿ 10 ಅಡಿ 8 ಅಡಿ ಇರಲಿ, 10-15 ಅಡಿಯಿರಲಿ ಈ ರೀತಿಯಾಗಿ ಜೀವನ ಮಾಡತಕ್ಕಂತಹ ಬಹುತೇಕ ಮನೆಗಳು ಇದೆ, ಅವೆಲ್ಲವನ್ನೂ ಕೊಳಚೆ ಪ್ರದೇಶವೆಂದು ಡಿಕ್ಲೇರ್ಡ್ ಮಾಡಿರುವುದಿಲ್ಲ; ಇಂತಹ ಪ್ರದೇಶಗಳಲ್ಲಿಯೂ ಕೂಡ, ಹಿಂದೆ ಯಾವ ರೀತಿ ಹಳದಿ ಕಾರ್ಡನ್ನು ವಿತರಣೆ ಮಾಡುವಾಗ ಒಂದು ಮಾನದಂಡವನ್ನು ಉಪಯೋಗಿಸಿದರೋ, ಅದೇ ಮಾನದಂಡವನ್ನು ಈಗಲೂ ಕೂಡ ಉಪಯೋಗಿಸಿ, ಎಲ್ಲೆಲ್ಲಿ ಬಡವರು ಈವತ್ತಿನದಿವಸ 100-00, 200-00 ರೂಪಾಯಿಗಳಿಗೆ ಬಾಡಿಗೆಗೆ ಇರತಕ್ಕಂತಹ ಉದಾಹರಣೆಗಳಿವೆ. ಇಂತಹವರೂ ಕೂಡ ಕೊಳಚೆ ಪ್ರದೇಶಗಳಲ್ಲಿ ಇರಬೇಕೆಂದು ಇಲ್ಲ, ಅದಕ್ಕೋಸ್ಕರ ಹಿಂದೆ ಯಾವ ರೀತಿಯಾಗಿ ವ್ಯವಸ್ಥೆಯನ್ನು ಮಾಡಿದ್ದಾರೋ, ಅದನ್ನು ಮುಂದುವರಿಸುವುದಕ್ಕೆ ಮಾನ್ಯ ಸಚಿವರು ಈ ಸದನದ ಮೂಲಕ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಯನ್ನು ನೀಡಬೇಕೆಂದು ತಮ್ಮ ಮೂಲಕ ನಾನು ವಿನಂತಿಯನ್ನು ಮಾಡುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ: ಸ್ಲಮ್ ನೋಟಿಫೈ ಮಾಡಬೇಕೆಂದು ಇಲ್ಲ. ನೋಟಿಫೈ ಮಾಡದೆ ಇದ್ದರೂ ಕೂಡ ಬಡವರು ಯಾರು ಇದ್ದಾರೆ ಅದೆಲ್ಲವನ್ನು ಕೂಡ ನಾವು ತೆಗೆದುಕೊಂಡಿದ್ದೇವೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ನೇರವಾಗಿ ನನ್ನ ಹತ್ತಿರ ಮಾತನಾಡಿದ್ದಾರೆ. ಎಲ್ಲಿ ಸ್ಲಮ್ ಇದೆಯೋ ಅದಕ್ಕೆ ಮಾತ್ರ ಕೊಡುತ್ತೇವೆ, ಉಳಿದವಕ್ಕೆ ಕೊಡುವುದಿಲ್ಲವೆಂದು ಹೇಳಿದ್ದಾರೆ. ಮಾನ್ಯ ಸಚಿವರು ಎಲ್ಲರಿಗೂ ಕೊಡುತ್ತೇವೆಂದು ಹೇಳಿದರೆ ನಮಗೆ ಬಹಳ ಸಂತೋಷ. ಎಲ್ಲೆಲ್ಲಿ ಬಡವರು ನಗರಗಳಲ್ಲಿ ಇದ್ದಾರೆ ಅವರಿಗೆ ಕೊಡುತ್ತೇವೆಂದರೆ, ಸಂತೋಷ. ತಾವು ಹೇಳುವ ಪ್ರಕಾರ ಅದು ಇಲ್ಲ. ಇದಕ್ಕೆ ಬೇಕಾದರೆ ತಾವು ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿಗಳ ಹತ್ತಿರ ಮಾತನಾಡಬಹುದು.

ಶ್ರೀ ರಾಮಲಿಂಗಾರೆಡ್ಡಿ: ಈ ಘೋಷಿತ ಮತ್ತು ಅಘೋಷಿತ ಪ್ರದೇಶಗಳಲ್ಲಿ ನಾವು ಎರಡು ಕಡೆಯೂ ಕೊಡುತ್ತಿದ್ದೇವೆ,

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಹಾಗೆ ಕೊಡುತ್ತಿಲ್ಲ. ಘೋಷಿತ ಮತ್ತು ಅಘೋಷಿತ ಪ್ರದೇಶಗಳಲ್ಲಿ ಎರಡಕ್ಕೂ ಕೊಟ್ಟರೆ ನಮ್ಮ ಅಭ್ಯಂತರವೇನೂ ಇಲ್ಲ, ಸಂತೋಷ.

ಶ್ರೀ ವಿ. ಸೋಮಣ್ಣ: ಮಾನ್ಯ ಅಧ್ಯಕ್ಷರೆ, ಮೊದಲು ಬೆಂಗಳೂರು ನಗರದಲ್ಲಿ ಯಾವ ರೀತಿ ಮಾಡಿದ್ದಾರೆ ಅದನ್ನೇ ಮುಂದುವರಿಸಿದರೆ ಸಾಕಾಗುತ್ತದೆ. ಮಾನ್ಯ ಸಚಿವರು ಹೇಳಿದರು, ಘೋಷಿತ ಮತ್ತು ಅಘೋಷಿತ ಕೊಳಚೆ ಪ್ರದೇಶಗಳಲ್ಲೂ ಸಹ ಕಾರ್ಡ್‌ಗಳನ್ನು ಕೊಡುತ್ತಿದ್ದೇವೆಂದರು. ಕೆಲವು ಅಧಿಕಾರಿಗಳು ಆ ಕೆಲಸವನ್ನು ಮಾಡುತ್ತಿಲ್ಲ. ಕೊಳಚೆ ಪ್ರದೇಶಗಳಲ್ಲಿರತಕ್ಕವರು ಬಡವರು, ಬೇರೆ ಪ್ರದೇಶಗಳಲ್ಲಿತಕ್ಕವರು ಬಡವರಲ್ಲವೆನ್ನುವ ಭಾವನೆ ಇದ್ದುದರಿಂದ ಹಿಂದೆ ಇದ್ದ ಸರ್ಕಾರ ಹಸಿರು ಕಾರ್ಡ್‌ಗಳನ್ನು ವಿತರಣೆ ಮಾಡಿದೆ. ಅದೇ ಒಂದು ಮಾನದಂಡವನ್ನು ಪ್ರಯೋಗ ಮಾಡಿದರೆ ಪ್ರಾಯಶಃ ಬಡವರು ಯಾರಿದ್ದಾರೆ ಎಲ್ಲೋ ಕೊನೆಯ ಹಂತದಲ್ಲಿರತಕ್ಕವರಿಗೆ ಸವಲತ್ತು ಪಡೆಯುವುದಕ್ಕೆ ಸಹಕಾರಿಯಾಗುತ್ತದೆ. ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡುವುದು ಇಷ್ಟೆ ಜನತಾದಳ ಸರ್ಕಾರ ಇದ್ದಾಗ ಯಾವ ಒಂದು ವ್ಯವಸ್ಥೆಯನ್ನು ಮಾಡಿದೆಯೋ ಅದನ್ನೇ ಮುಂದುವರಿಸಿಕೊಂಡು ಹೋಗುವುದಕ್ಕೆ ತಾವು ಸೂಚನೆಯನ್ನು ನೀಡಬೇಕು.

ಶ್ರೀ ರಾಮಲಿಂಗಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರ ಹಸಿರು ಕಾರ್ಡ್ ಏನು ಕೊಡುತ್ತಿತ್ತು ಅದಕ್ಕಿಂತ ಒಳ್ಳೆಯ ಕಾರ್ಯಕ್ರಮ ಇದು. ಹಳದಿ ಕಾರ್ಡನ್ನು 17 ಸಾವಿರ ವರಮಾನ ಇರತಕ್ಕವರಿಗೆ ಗ್ರಾಮೀಣ ಪ್ರದೇಶಗಳಲ್ಲಿ ಕೊಡುತ್ತಿದ್ದೇವೆ. ನಗರಪ್ರದೇಶಗಳಲ್ಲಿ ಸಹ ಕೊಡುತ್ತಿದ್ದೇವೆ. ಹಿಂದಿನ ಕಾರ್ಯಕ್ರಮಕ್ಕಿಂತ ಇದು ಒಳ್ಳೆಯ ಕಾರ್ಯಕ್ರಮವಾಗಿದೆ. ಈ ಬಗ್ಗೆ ಬೆಂಗಳೂರು ನಗರದ ಎಲ್ಲಾ ಶಾಸಕರುಗಳ ಸಭೆಯನ್ನು ನಾನು ಕರೆಯುತ್ತೇನೆ.

ಅಧ್ಯಕ್ಷರು: ಆಯಿತು ಬಿಡಿ; ಈ ಪ್ರಶ್ನೆ ಬೆಂಗಳೂರು ನಗರಕ್ಕೆ ಸಂಬಂಧಪಟ್ಟಿದ್ದು. ರೂರಲ್ ಪಾರ್ಟ್ಸ್‌ನಲ್ಲಿ ಸಿಎಂಸಿಗಳು ಇವೆ. ತಾವು ಸಪರೇಟಾಗಿ ಬರೆದು ಕಳುಹಿಸಿ. ಇಲ್ಲದಿದ್ದರೆ ಅರ್ಬನ್ ಡೆವಲಪ್‌ಮೆಂಟ್‌ಮೇಲಿನ ಡಿಮ್ಯಾಂಡ್ ಬರುತ್ತದೆ, ಆಗ ಮಾತನಾಡಿ.

ಶ್ರೀ ರಾಮಲಿಂಗಾರೆಡ್ಡಿ: ಇದು ನಗರಪ್ರದೇಶಗಳಿಗೆ ಸಂಬಂಧಪಟ್ಟ ಪ್ರಶ್ನೆ. ನಗರಪ್ರದೇಶದ ಶಾಸಕರ ಸಭೆಯನ್ನು ಕರೆದು ಮಾತನಾಡುತ್ತೇನೆ. ಎಲ್ಲೆಲ್ಲಿ ತೊಂದರೆಯಿದೆ, ಅದರ ಬಗ್ಗೆ ಮಾತನಾಡೋಣ.

ಅಧ್ಯಕ್ಷರು: ಇದು ಕೊನೆಯ ಪ್ರಶ್ನೆ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳು ಬೆಂಗಳೂರು ನಗರದ ಎಲ್ಲಾ ಶಾಸಕರುಗಳನ್ನು ಕರೆಸಿ ಮಾತನಾಡುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಸಿ. ಚೆನ್ನಿಗಪ್ಪ:- ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಿದ್ದು

ಅಧ್ಯಕ್ಷರು: ಅದರ ಬಗ್ಗೆ ಬೇರೆ ಪ್ರಶ್ನೆ ಕಳುಹಿಸಿ. ರೂರಲ್ ಪಾರ್ಟ್ಸ್‌ಗಳಲ್ಲಿ ಕೊಳಚೆ ಪ್ರದೇಶಗಳು ಬೇಕಾದಷ್ಟು ಇವೆ, ನನಗೂ ಗೊತ್ತಿದೆ. ಇಲ್ಲದಿದ್ದರೆ ಒಂದು ಕೆಲಸ ಮಾಡಿ, ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡೋಣ ಬರೆದು ಕಳುಹಿಸಿ. ಈಗ ಅದಕ್ಕೆ ಅವಕಾಶವಿಲ್ಲ.

ಶ್ರೀ ರಾಮಲಿಂಗಾರೆಡ್ಡಿ: ಬೆಂಗಳೂರು ನಗರ ಒಂದೇ ಅಲ್ಲ, ರಾಜ್ಯದಲ್ಲಿರತಕ್ಕ ಎಲ್ಲಾ ಕೊಳಚೆ ಪ್ರದೇಶಗಳಲ್ಲಿ ಕೊಡುತ್ತೇವೆ.

ಅಧ್ಯಕ್ಷರು: ಅರ್ಧಗಂಟೆ ಚರ್ಚೆಗೆ ಅಲೌ ಮಾಡುತ್ತೇನೆ, ದಯವಿಟ್ಟು ಬರೆದು ಕಳುಹಿಸಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಬಡವರು ಹೋಗಿ ದೂರು ಕೊಟ್ಟರೆ ಅದನ್ನು ಪರಿಶೀಲನೆ ಮಾಡುವುದಕ್ಕೆ ಯಾರೂ ಇಲ್ಲ. ಅದಕ್ಕೋಸ್ಕರ ಒಂದು ಸಮಿತಿಯನ್ನು ರಚನೆ ಮಾಡುತ್ತೀರಾ? ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಕಾರ್ಡ್ ಕೊಡುವಾಗ 45 ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ, ಅದನ್ನು ದಯವಿಟ್ಟು ಕೈಬಿಡಬೇಕು. ಈವೊಂದು ವಾರ್ಷಿಕ ಆದಾಯ ಏನಿದೆ ಅದು ಬೇರೆ ಬೇರೆ ಕಾರಣಗಳಿಂದ ಐದಾರು ಸಾವಿರ ವರಮಾನ ಬರುತ್ತದೆ. ಅದನ್ನು ವಾರ್ಷಿಕ ಆದಾಯವೆಂದು ಬರೆದರೆ ಅವರು ಬಡತನರೇಖೆಗಿಂತ ಕೆಳಗೆ ಇರುವವರಿಗೆ ಅನುಕೂಲವಾಗುತ್ತದೆ. ದಯವಿಟ್ಟು ನಾನು ಈ ಮೂರು ಅಂಶಗಳನ್ನು ಪರಿಶೀಲನೆ ಮಾಡಬೇಕು, ಅದಕ್ಕೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ: ಬೆಂಗಳೂರು ನಗರದ ಶಾಸಕರ ಸಭೆಯನ್ನು ಕರೆದು ಮಾತನಾಡುತ್ತೇನೆ, ಏನಾದರೂ ಲೋಪದೋಷಗಳು ಇದ್ದರೆ ಖಂಡಿತಾ ಸರಿ ಮಾಡುತ್ತೇನೆ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಮುಗಿಯಿತು.

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 12-7-2002ರಂದು ಲಿಖಿತ ಮೂಲಕ ಉತ್ತರಿಸುವ 49 ಪ್ರಶ್ನೆಗಳ ಪೈಕಿ 38 ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಹಾಗೂ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು. ಅನುಬಂಧ -1

3. ಪ್ರಕಟಣೆ

Mr. Speaker: Hon'ble Minister, Dr. Nazrulia Islam of Assam State is in the Visitors' Gallery viewing the proceedings of the House. This is for your information.

(Applause)